ಕರೆದುಕೊಂಡು ಹೋಗಿ ರಾತ್ರಿ ಎಷ್ಟೋ ಹೊತ್ತಿಗೆ ವಾಪಸ್ಸಾದರು. ಶರ್ಮಿಳಾ ಜಡೆಯನ್ನೆಲ್ಲಾ ಕತ್ತರಿಸಿ ತುಂಡಾಗಿ ಬಾಬ್ ಮಾಡಿಕೊಂಡಿದ್ದಾಳೆ.. ಮನೆಯಲ್ಲಿ, ಹೊರಗಡೆ ಬಿಂದಾಸ್ ಆಗಿ ಶಾರ್ಟ್ಸ್, ಪ್ಯಾಂಟ್ಸ್ ಎಲ್ಲ ಹಾಕಿಕೊಂಡು ತಿರುಗ್ತಾಳೆ. ಛೇ! ನಾನೇ ಸಂಯುಕ್ತಾಗೆ ಚೂಡಿದಾರ್ ಹಾಕ್ಕೊ, ಫಾಗ್ರಾ ಚೋಲಿ ಹಾಕಿಕೋ ಎಂದು ಎಷ್ಟು ಹಿಂಸೆ ಕೊಟ್ಟುಬಿಟ್ಟೆ. ಸಂಯುಕ್ತಾ ಚಿಕ್ಕವಳಿದ್ದಾಗ ಫಾಗ್ರಾದ ಎರಡು ಲಾಡಿಗಳನ್ನು ಹಿಡಿದು ಬೇಸರದಿಂದ, 'Now what should I do with this, Mama please don't make me wear this... I am not used to Indian clothes... ' ಎಂದು ಬೇಡಿಕೊಂಡಾಗಲೆಲ್ಲಾ ಅವಳನ್ನು ಗದರುತ್ತಿದ್ದೆ. ಅಪರಿಚಿತ ನೆಲದಲ್ಲಿ ಭಾರತದ ಧ್ವಜ ಹಾರಿಸುವ ಪ್ರಯತ್ನದಲ್ಲೇ ಜೀವನವನ್ನೆಲ್ಲಾ ಅಸಮಾಧಾನದಿಂದ ಕಳೆದುಬಿಟ್ಟೆ. ಈಗ ಸಂಯುಕ್ತಾ ದೊಡ್ಡವಳಾಗಿ ತನಗಿಷ್ಟ ಬಂದ ಹುಡುಗನನ್ನು ಮದುವೆಯಾಗ್ತೀನಿ ಅಂತ ಇದ್ದಾಳೆ. ಚಿಕ್ಕವಳಿದ್ದಾಗ ಬಲವಂತದಿಂದ ಫಾಗ್ರ ತೊಟ್ಟು ಎಡವಿ ಬಿದ್ದಂತೆ ಈಗಲೂ ನನ್ನ ಬಲವಂತಕ್ಕೆ ನಾನು ಆರಿಸಿದ ಹುಡುಗನನ್ನು ಮದುವೆಯಾಗಿ ಜೀವನದಲ್ಲಿ ಎಡವಿದರೆ.. ಛೆ! ನೆನಸಿಕೊಂಡರೇ ಭಯವಾದಂತಾಯಿತು... ಹಾಗೆಯೇ ಬೆವರೊರೆಸಿಕೊಂಡು ಮಲಗಿದೆ.

* * *

ಮೂರು ದಿನಗಳ ನಂತರ ಮದುವೆಯ ಛತ್ರದಲ್ಲಿ ಎಲ್ಲರೂ ಸೇರಿದೆವು. ಅಣ್ಣ- ಅತ್ತಿಗೆ ಬಹಳ ಸಂಭ್ರಮದಿಂದ ಬೀಗರನ್ನು ಬರಮಾಡಿಕೊಂಡರು. ಎಲ್ಲೆಡೆ ಪಂಜಾಬಿ ಕನ್ನಡ ಬೆರೆತು ಹೋದಂತೆ ಭಾಸವಾಗುತ್ತಿತ್ತು. ರಾಹುಲ್ ಮತ್ತು ಶರ್ಮಿಳಾ ಖುಷಿ ಖುಷಿಯಾಗಿ ಎಲ್ಲರೊಡನೆ ಮಾತನಾಡುತ್ತಿರು. ನನ್ನ ಕಣ್ಣುಗಳು ಸಂಯುಕ್ತಾಳನ್ನು ಹುಡುಕುತ್ತಿದ್ದವು.

ಸಂಯುಕ್ತಾ ಸಂಭ್ರಮದಿಂದ ಸೀರೆಯುಟ್ಟು ಓಡಾಡುತ್ತಿದ್ದಳು. ಇವಳೇ ನನ್ನ ಮಗಳಾ ಎನಿಸಿತು. ನನ್ನ ಹತ್ತಿರ ಬಂದು, 'Mummy, Rahul is nice, isn't he?' ಎಂದು ಹೇಳಿದಳು. ಇವಳೇನು ಇಷ್ಟು ಸಂತೋಷವಾಗಿದ್ದಾಳಲ್ಲಾ.. ಇಂಡಿಯಾಗೆ ಬರಲ್ಲ ಅಂತಿದ್ದವಳು ಇಂದು ಇಲ್ಲಿ ಹೀಗೆ...ಅಬ್ಬಾ ಆಶ್ಚರ್ಯವಾಯಿತು. ನನಗೆ. ಹೀಗೇ ಆಶ್ಚರ್ಯ ಗೊಂದಲಗಳ ನಡುವೆಯೇ ಮದುವೆ ಸಂಭ್ರಮ ಮುಗಿಯಿತು. ನನ್ನ ಮನದಲ್ಲಿ ಸಂಭ್ರಮದ ಮಧ್ಯೆಯೂ ಬೇಸರ, ಖಾಲಿತನ ತುಂಬಿಕೊಂಡಿತ್ತು. ಆ ಜನಜಂಗುಳಿಯಲ್ಲಿ ನನ್ನ ಮನಸ್ಸಿನಲ್ಲಿ ಬೇರೂರಿದ್ದ ಭಾವನೆಗಳನ್ನೆಲ್ಲಾ ಕಳೆದುಕೊಂಡು ಬಿಟ್ಟೆ ಎನ್ನಿಸಹತ್ತಿತ್ತು. ನನ್ನತನವನ್ನೇ ಬಿಟ್ಟು ಕೊಡುತ್ತಿರುವ ಭಾವನೆ... ನನ್ನನ್ನು ಕಾಡಹತ್ತಿತ್ತು. ಎಲ್ಲಾ ತಲೆಕೆಳಗಾದಂತೆ ಭಾಸವಾಯಿತು. ಅಮೆರಿಕದಲ್ಲಿನ ನನ್ನ ಮನೆ ನೆನಪಾಗುತ್ತಿತ್ತು. ಹಾಂ, 'ನನ್ನ ಮನೆ' ಎಂದೆನಾ? ನನ್ನಸಿಕೆಗಳೆಲ್ಲಾ ಬದಲಾದಂತೆನಿಸುತ್ತಿತ್ತು. ಮದುವೆ ಮುಗಿಯಿತು. ನಾನು ಸಂಯುಕ್ತಾ ಒಬ್ಬರೊಡನೊಬ್ಬರು ಹೆಚ್ಚು ಮಾತನಾಡದೆ ವಾಪಸ್ ಹೊರಡುವ ತಯಾರಿ ನಡೆಸಿದ್ದೆವು. ಆ ಮೌನದಲ್ಲೂ ಒಬ್ಬರಿಗೊಬ್ಬರು ಮಾತನಾಡುತ್ತಿದ್ದೇವೇನೋ ಎನ್ನಿಸುತ್ತಿತ್ತು. ಕೊನೆಗೆ ಸಂಯುಕ್ತಾ ನಗುನಗುತ್ತಾ ಎಲ್ಲರಿಗೂ ಬೈ ಹೇಳುತ್ತ ಏರ್‌ಪೋರ್ಟ್ ಬಾಗಿಲ ಹತ್ತಿರ ಬಂದಳು. ನಾನು ಮಾತ್ರ ನನಗರಿವಿಲ್ಲದೆಯೇ ಎಲ್ಲರಿಗೂ ಬೆನ್ನು ಹಾಕಿ ಸರಸರನೆ ನಡೆದುಬಿಟ್ಟೆ.

ಫ್ಲೈಟ್ ಟೇಕ್ ಆಫ್ ಆಗಲು ಇನ್ನೂ ಸಮಯವಿತ್ತು. ನಾನು, ಸಂಯುಕ್ತಾ ಇಬ್ಬರೇ... ನಮ್ಮಿಬ್ಬರ ಜೊತೆ ಯಾರೂ ಇಲ್ಲ. ನಮ್ಮ ನೆನಪುಗಳಲ್ಲಿ ನಾವು ಮುಳುಗಿಬಿಟ್ಟದ್ದೇವೆ. ನನಗೇಕೆ ಸಂಯುಕ್ತಾಳಿಗೇನೋ ಹೇಳಬೇಕೆನಿಸುತ್ತಿತ್ತು. ಭಾರತೀಯ ಪರಂಪರೆ, ಸಂಸ್ಕೃತಿ, ಸಂಪ್ರದಾಯ ಇವುಗಳನ್ನೆಲ್ಲಾ ಮೀರಿದ ತಾಯಿ ಮಗಳ ಸಂಬಂಧದಿಂದ ಹೊರಹೊಮ್ಮಿದ ವಾತ್ಸಲ್ಯದ ಮಾತುಗಳವು. ಏನೇನೋ ಮನಸ್ಸು ಹೇಳುತ್ತಿತ್ತು. ಆದರೆ ಸಂಯುಕ್ತಾಳ ಕೈಯನ್ನು ನನ್ನ ಕೈಯಲ್ಲಿರಿಸಿ.... ಇಷ್ಟು ಮಾತ್ರ ಹೇಳಿದೆ, 'ಅಮೆರಿಕಕ್ಕೆ ಹೋದ ತಕ್ಷಣ ನಿನ್ನ ಮದುವೆ ಮದುವೆ ದಿನಾಂಕ ನಿಗದಿ ಮಾಡೋಣ. ರೋಜರ್ ಪೇರೆಂಟ್ಸ್ ನಮ್ಮನ್ನು ಪರಿಚಯ ಮಾಡಿಕೊಡು. ಆದಷ್ಟು ಬೇಗ...'

'ಅಮ್ಮಾ... ಮಮ್ಮೀ...' ಸಂಯುಕ್ತಾ ಚೀರಿದಳು. ಮತ್ತೆ ಮೆದುವಾಗಿ, 'ಅಮ್ಮಾ, ನೀನೂ ರೋಜರ್‌ನ ಮನಸಾರೆ ಒಪ್ಪಿದರೆ ಮಾತ್ರ ನಾನು ಮದುವೆಯಾಗ್ತೀನಿ' ಎಂದು ಹೇಳಿ ಭುಜಕ್ಕೊರಗಿದಳು. ನಾನು ಅವಳ ಕೆನ್ನೆ ತಟ್ಟುತ್ತಾ ವಿಶ್ವಾಸದ ನಗೆ ಬೀರಿದೆ. ನನ್ನ ಹಗುರಾದ ಮನ ನನ್ನ ಮನೆಯ ಕಡೆ ರೆಕ್ಕೆ ಬಿಚ್ಚಿ ಹಾರಿತ್ತು. ●